ದಿ:4.9.2003 ರಲ್ಲಿ ಸೂಚಿಸಿರುತ್ತಾರೆ. ಅದರಂತೆ ಹಿಂದಿನ ಮುಂಗಡ ಪತ್ರದಲ್ಲಿ ಮಂಜೂರಾದ ಆಯ-ವ್ಯಯದಂತೆ ಖರ್ಚು ಮಾಡುತ್ತಿದ್ದು, ಹಿಂದಿನ ಬಜೆಟ್‌ನಲ್ಲಿ ಇಲ್ಲದ ಖರ್ಚುಗಳನ್ನು ಪ್ರತ್ಯೇಕವಾಗಿ ಇಲಾಖೆಯಿಂದ ಮಂಜೂರಾತಿ ಪಡೆದು ನಿರ್ವಹಿಸುತ್ತಿದ್ದಾರೆ.

2082 (2916) ಶ್ರೀ ಗೋಪಾಲ ಪೂಜಾರಿ .ಕೆ. (ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಲ್ಲೂರು ಮುಕಾಂಬಿಕಾ ದೇವಸ್ಥಾನದಲ್ಲಿ 4 ವರ್ಷ, 10 ತಿಂಗಳುಗಳಿಂದ ಎಷ್ಟು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ;

ಆ) ಮೂಕಾಂಬಿಕಾ ದೇವಸ್ಥಾನದ ಪ್ರೌಢ ಶಾಲೆಗಳಿಗೆ ಎಷ್ಟು ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ;

ಇ) ಇವರ ನೇಮಕವನ್ನು ಮಾಡಲು ಯಾವ ಮಾನದಂಡ ಉಪಯೋಗಿಸಲಾಯಿತು;

ಈ) ಮೂಕಾಂಬಿಕಾ ದೇವಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರಿಗೆ ಎಷ್ಟು ದಿನಗೂಲಿ ಕೊಡಲಾಗುವುದು;

ಉ) ಕಳೆದ 5 ವರ್ಷಗಳ ಹಿಂದೆ ಕೆಲಸ ನಿರ್ವಹಿಸುತ್ತಿದ್ದ ದಿನಗೂಲಿ ನೌಕರರಿಗೆ ಕೊಡಲಾಗುತ್ತಿದ್ದ ಸಂಬಳ ಎಷ್ಟು;

ಊ) ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೇ ಇರುವುದು ಹಾಗೂ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಬಂದಿದ್ದಲ್ಲಿ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಕೊಲ್ಲೂರು ಶ್ರೀಮೂಕಾಂಬಿಕಾ ದೇವಾಲಯದಲ್ಲಿ ಕಳೆದ 4 ವರ್ಷ 10 ತಿಂಗಳಲ್ಲಿ ಒಟ್ಟು 55 ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ.

ಆ) ಕೊಲ್ಲೂರು ಶ್ರೀಮೂಕಾಂಬಿಕಾ ದೇವಾಲಯದ ವತಿಯಿಂದ ನಡೆಸುತ್ತಿರುವ ಅನುದಾನ ರಹಿತ ಪ್ರೌಢಶಾಲೆಗೆ 23 ಜನ, ಅನುದಾನಿತ ಶಾಲೆಗೆ 2 ಜನ ಒಟ್ಟು 25 ಜನ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ.

ಇ) ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಆಡಳಿತ ಮಂಡಳಿ ಸಭೆ ದಿ:25.11.2000ದ ನಿರ್ಣಯದಂತೆ ಪ್ರೌಢಶಾಲೆಯ ಸಿಬ್ಬಂದಿಯನ್ನು ಸಂದರ್ಶನ ನಡೆಸಿ ಜೇಷ್ಠತೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ದೇವಳದ ಸಿಬ್ಬಂದಿಯನ್ನು ದೇವಾಲಯದ ಆಡಳಿತ ಹಿತದೃಷ್ಟಿಯಿಂದ ಆಡಳಿತ ಮಂಡಳಿಯ ಸಭೆಯ ನಿರ್ಣಯದ ಮೇರೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಈ) ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಅವರು ನಿರ್ವಹಿಸುತ್ತಿರುವ ಕೆಲಸದ ಮೇರೆಗೆ ಮಾಹೆಯಾನ ರೂ. 3,000–00 ದಿಂದ ರೂ. 4550–00 ರವರೆಗೆ ನಿಗದಿತ ವೇತನ ಪಾವತಿ ಮಾಡಲಾಗುತ್ತಿದೆ.

ಉ) ಕಳೆದ 5 ವರ್ಷಗಳ ಹಿಂದೆ 2000ನೇ ಜನವರಿ ತಿಂಗಳಿನಲ್ಲಿ ಒಟ್ಟು 27 ಮಂದಿ ದಿನಗೂಲಿ ನೌಕರರಿಗೆ ಅವರ ಕೆಲಸಕ್ಕೆ ಅನುಗುಣವಾಗಿ ದಿನ ಒಂದಕ್ಕೆ ರೂ.20–00 ಗಳಿಂದ ರೂ.60–00 ಗಳವರೆಗೆ ಪಾವತಿಸಲಾಗುತ್ತಿತ್ತು.

ಊ) ಹೌದು.

ಋ) ಕೊಲ್ಲೂರು ಶ್ರೀಮೂಕಾಂಬಿಕಾ ದೇವಾಲಯದಲ್ಲಿ ಒಳಚರಂಡಿ ಅಷ್ಟು ಸಮರ್ಪಕವಾಗಿ ಇಲ್ಲದಿರುವುದರಿಂದ, ಪ್ರತ್ಯೇಕ ಪೈಪ್ ಲೈನ್ ಮೂಲಕ ಕೊಳಚೆ ನೀರಿನ ಶುದ್ಧೀಕರಣ ಘಟಕಕ್ಕೆ ಬಿಡಲಾಗುತ್ತಿದೆ.

ಬೋರ್‌ವೆಲ್‌ನಿಂದ, ತೆರೆದ ಬಾವಿಯಿಂದ, ಮತ್ತು ಜಾಕ್ ವೆಲ್ ಗಳಿಂದ ನೀರನ್ನು ಶುದ್ಧೀಕರಿಸಿ, ನೀರು ಸರಬರಾಜು ಮಾಡುತ್ತಿರುವುದರಿಂದ, ಸದ್ಯಕ್ಕೆ ನೀರಿನ ಅಭಾವ ಇರುವುದಿಲ್ಲ.

ಕೊಲ್ಲೂರು ಕ್ಷೇತ್ರದ ಒಳಚರಂಡಿ ವ್ಯವಸ್ಥೆ ಮತ್ತು ಕುಡಿಯುವ ನೀರಿನ ಬಗ್ಗೆ ಕೆ.ಯು.ಐ.ಡಿ.ಎಫ್.ಸಿ. ಯಿಂದ ನೀಲಿ ನಕಾಶೆಯನ್ನು ತಯಾರಿಸಲಾಗಿದೆ.

2083 (2917) ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಕ್ಸಲೀಯರ ಪ್ರಾಬಲ್ಯವಿರುವ ಪ್ರದೇಶಗಳಲ್ಲಿನ ಜನರಿಗೆ ವಿದ್ಯುತ್ತೀಕರಣ ಹಾಗೂ ಇತರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು;

ಆ) ನಕ್ಸಲೀಯರ ಪೀಡಿತವಿರುವ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ಯಾಕೇಜ್ ಪ್ರೋಗ್ರಾಂನ್ನು ಸರ್ಕಾರ ಅನಷ್ಟಾನಗೊಳಿಸುತ್ತಿದೆಯೇ;

ಇ) ಅನುಷ್ಟಾನಗೊಳಿಸುತ್ತಿದ್ದರೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುವುದು;

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು)

ಅ) ಸರ್ಕಾರವು ವಿದ್ಯುಚ್ಛಕ್ತಿ ಮತ್ತು ಇತರೆ ಸೌಲಭ್ಯಗಳನ್ನು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ಒದಗಿಸುತ್ತಿದೆ. ಭೌತಿಕ ತೊಂದರೆಗಳಿಂದ ಮತ್ತು ಚದುರಿದಂತೆ ಇರುವ ಜನವಸತಿಗಳಿಗೆ ವಿದ್ಯುತ್ ಸಂಪರ್ಕವನ್ನು ಪೂರೈಸಲು ಸಾಧ್ಯವಿಲ್ಲದ ಕಡೆ, ಸೌರಶಕ್ತಿ ದೀಪಗಳನ್ನು